ನೋಟಿಸ.

ಕೋಲಾರ ಡಿಸ್ಟ್ರಿಕ್ಟಿನಲ್ಲಿ 1907—08ನೆ ಸಾಲಿನಲ್ಲಿ ದೊರಿಯಬಹುದಾದ ಪಸಾರಿ ಜೆನಸಿಗಳು ಕೊಂಡುಕೊಳ್ಳುವ ವಿಷಯದಲ್ಲಿ ಅಕ್ಟೋಬರ್ ತಾರೀಖು 10ನೆ ಮರ್ತುಂನ ಮೈಸೂರು ಗೆಜೆಟ್ II‌ನೆ ಭಾಗದ 492ನೆ ಪೇಜಿನಲ್ಲಿ ಪಾಯಿಷ್ ಆಗಿರುವ 1907ನೆ ಸೆಪಟಂಬರ್ ತಾರೀಖು 30ನೆ ಮರ್ತುಂನ ನೋಟಿಫಿಕೇಷ್ಣಗೆ ಸಮಸ್ತ ಜನಗಳು ಗಮನ ಕೊಡಬೇಕು.

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ವೊಕ್ತಾಂ ಮುತ್ಕೋಡಿ, ತಾರೀಖು 13ನೆ ಅಕ್ಟೋಬರ್ 1907.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟ್ ಡಿಪೋಗಳಲ್ಲಿ ಆಯಾಯ ಡಿಪೋಗಳ ಕೆಳಭಾಗದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಚಾಬೀನಾವನ್ನ ಬಹಿರಂಗವಾಗಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ವಿಕ್ರಯ ಮಾಡಲ್ಪಡುತ್ತೆ :—

ನಂಬರ್	ನಾಟುಗಳ ಜಾತಿ	ದಾನಿವಾಸ ಡಿಪೋ 22—11—1907.		ಬೆಂಕೀಪುರ ಡಿಪೋ 25—11—1907.		ತರೀಕೆರೆ ಡಿಪೋ 27—11—1907.		ಷರಾ.
		ಅದದು	ಅಡಿ	ಅದದು	ಅಡಿ	ಅದದು	ಅಡಿ	
1	ಸಾಗುವಾನಿ ನಾಟಾಗಳು ...	....	....	15	160	70	1,500	
2	ಡಿಟೋ ಬೆಲಗುಗಳು ..	4	22	...	...	30	300	
3	ಡಿಟೋ ತೀರುಗಳು	...	...	...	...	...	3,000	
4	ಹೊನ್ನೆ ನಾಟಾ ...	124	3,130	100	3,000	20	500	ಕಡಿಸ್ಪು ಹೆಚ್ಚು ಸ್ವಲ್ಪ
5	ಮತ್ತಿ ನಾಟಾ ..	134	4,600	60	1,900	40	1,000	
6	ಹುನ್ನಾಲು ನಾಟಾ ...	15	340	10	300	40	1,000	
7	ನಂದಿ ನಾಟಾ ..	12	240	...	...	40	1,000	
8	ಯತ್ಯಾಗದ ನಾಟಾ ...	20	500	30	900	20	500	
9	ಬೀಟೆ ನಾಟಾ ..	10	300	25	860	20	500	
10	ಮಟಿ ನಾಟಾ ..	10	300	...	...	4	100	
11	ನೇರಲು ನಾಟಾ ...	2	54	...	...	...	...	

ಷರತ್ತುಗಳು :—ಟಡ ದರಖಾಸ್ತುದಾರನು ಹರಾಜು ಆದ ಮೂರು ದಿವಸಗಳೊಳಗಾಗಿ ಹರಾಜು ಮೊಬಲಗು ಪೈಕಿ ಕೀ ಕಡ 25ರಂತೆ ಆಗುವ ಮೊಬಲಗನ್ನು ಹತ್ತರ ಇರುವ ಖಜಾನೆಗೆ ಕಟ್ಟತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮಾಲನ್ನು ದುಸರಾ ಹರಾಜು ಮಾಡಿ ಆದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಪಡಿಸುತ್ತೆ.

2. ಖರೀದಿ ಮೊಬಲಗು ಪೈಕಿ ಉಳಿದ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 (ಮೂವತ್ತು) ದಿವಸಗಳಲ್ಲಿ ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಇದಕ್ಕೆ ಮೊದಲೇ ಕಟ್ಟರುವ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಕೀರಿಸಿಕೊಳ್ಳಲ್ಪಡುತ್ತೆ. ಮತ್ತು ಲಾಟ್ ಮರಗಳನ್ನು 1ನೆ ಪ್ಯಾರಾದಲ್ಲಿ ಹೇಳಿರುವ ಪ್ರಕಾರ ದುಸರಾ ಹರಾಜು ಮಾಡಲ್ಪಡುತ್ತೆ.

3. ತಾನು ಹರಾಜಿನಲ್ಲಿ ಪಡದಿರುವ ಚಪ್ಪುಬೀನಾ ಕಿಮ್ಮತ್ತು ಪೂರ್ತಿ ಪಾವತಿ ಮಾಡದೆಯೂ ಮತ್ತು ಸದರಿ ಚಪ್ಪುಬೀನಾವನ್ನು ಸಾಗಿಸುವದಕ್ಕೆ ರಹದಾರಿ ಪಡೆಯದೆಯೂ ಮಾಲನ್ನು ರಫ್ತು ಮಾಡಕೂಡದು.

4. ಹರಾಜು ತಾರೀಖು ಲಾಗಾಯಿತು 90 (ತೊಂಭತ್ತು) ದಿವಸಗಳ ಮೇಲ್ಪಟ್ಟು ಮರಗಳನ್ನು ಡಿಪೋಗಳಿಂದ ಸಾಗಿಸದೇ ಇದ್ದಲ್ಲಿ ಹರಾಜು ತಾರೀಖು ಲಾಗಾಯಿತು ಖರೀದಿ ಮೊಬಲಗಿನ ಮೇಲೆ ವರ್ಷ ಬಂದಕ್ಕೆ ಶೇಕಡ ಬಂದಕ್ಕೆ 12 ರೂ. ಪಾಯಿನ ಮೇರೆ ಡಿಪೋ ಭಾಡಾ ವಸೂಲ್ ಮಾಡಲಾಗುತ್ತೆ.

ಬಿ. ಹೀರಾಸಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.